ಆ) ಕೋಲಾರ ಕ್ಷೇತ್ರದ ಕಲ್ಲಂದೂರು ಗ್ರಾಮದ ನಾರಾಯಣ ಸ್ವಾಮಿ ಎಂಬ ರೈತ ಆತ್ಮಹತ್ಯೆ ಮಾಡಿಕೊಂಡಿರುವುದು.

+ ಶ್ರೀ ಕೆ.ಶ್ರೀನಿವಾಸಗೌಡ(ಕೋಲಾರ): ನಿನ್ನೆ ನನ್ನ ಮತಕ್ಷೇತ್ರದಲ್ಲಿನ ಕಲ್ಲಂದೂರು ಗ್ರಾಮದಲ್ಲಿ ನಾರಾಯಣಸ್ವಾಮಿ ಎಂಬೊಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೋಲಾರ ಜಿಲ್ಲೆಯಲ್ಲಿ ಒಂದೇ ತಿಂಗಳಲ್ಲಿ ಏಳು ಆತ್ಮಹತ್ಯೆಗಳಾಗಿವೆ. ರೈತ ತಾನು ಸಂಕಷ್ಟದಲ್ಲಿದ್ದಾಗ, ಸಾಲ ಮಾಡಿ ಸತ್ತ, ಬೆಳೆ ಕೈಗೆ ಬಾರದೆ, ಹಣ ಸಿಗದೆ, ಸಾಲ ತೀರಿಸದೆ, ತನ್ನ ಆತ್ಮಗೌರವ ಉಳಿಸಿಕೊಳ್ಳಲು ಸತ್ತ ಎನ್ನುವುದು ಎಲ್ಲಾ ಊರುಗಳಲ್ಲಿಯೂ ಹರಡಿದೆ. ತಮಗೆ ಗೊತ್ತಿರುವ ಹಾಗೆ ಕೋಲಾರ ಮೊದಲಿನಿಂದಲೂ ಬರಗಾಲಕ್ಕೆ ಹೆಸರುವಾಸಿಯಾದ ಜಿಲ್ಲೆ. ಆದರೂ ಜನ ಎಂಥೆಂಥ ಸಂದಿಗ್ಧ ಪರಿಸ್ಥಿತಿ ಬಂದರೂ ಗೆಡ್ಡೆಗೆಣಸು ತಿಂದುಕೊಂಡು ಹೇಗೋ ಜೀವನ ಮಾಡುತ್ತಿದ್ದರು. ಆವತ್ತು ಯಾರೂ ಸಾಯಲಿಲ್ಲ, ಆದರೆ ಇವತ್ತು ರೈತನ ಆತ್ಮಹತ್ಯೆಯ ಪ್ರಕರಣಗಳು ಎಲ್ಲಾ ಪತ್ರಿಕೆಗಳಲ್ಲಿ ಪ್ರತಿನಿತ್ಯ ಇದ್ದೇ ಇರುತ್ತವೆ. ಇದಕ್ಕೆ ವೈಜ್ಞಾನಿಕವಾದ ಕಾರಣಗಳನ್ನು ಕಂಡುಹಿಡಿಯಬೇಕಾಗಿದೆ, ಆದರೆ ನಾವು ಯಾರೂ ಇದರಲ್ಲಿ ರಾಜಕೀಯ ಮಾಡಬಾರದು, ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವವರು ನಾವು ಆಗಬಾರದು, ಅವರು ಯಾವುದೇ ಪಕ್ಷದವರಾದರೂ ಕೂಡ ಇದರ ಬಗ್ಗೆ ಇವತ್ತು ಚಿಂತನೆ ಮಾಡಬೇಕಾಗಿದೆ. ಇದು ಏಕೆ ಆಯಿತು? ಏನಾಯಿತು ಎಂಬುದನ್ನು ಕಡೆಗೆ ಚರ್ಚಿಸೋಣ, ಅದಕ್ಕಿಂತ ಮುಂಚಿತವಾಗಿ ಇವತ್ತು ರೈತ ಆತ್ಮಹತ್ಯೆಗೆ ಶರಣು ಹೋಗತಕ್ಕಂಥ ಪರಿಸ್ಥಿತಿಯಲ್ಲಿ ಸರ್ಕಾರ ಯಾವ ದಿಕ್ಕಿನಲ್ಲಿ ನೋಡಬೇಕು ಹಾಗೂ ಇದರ ಬಗ್ಗೆ ವೈಜ್ಞಾನಿಕವಾಗಿ ಚಿಂತನೆ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಎರಡನೆಯದಾಗಿ ನಮ್ಮಲ್ಲಿ ಇವತ್ತು ಖಾಸಗಿಯವರು ಹಣ ಕೊಡುವವರು ಜಾಸ್ತಿಯಾಗಿದ್ದಾರೆ. ಒಂದು ತಿಂಗಳಿಗೆ ನೂರಕ್ಕೆ 10 ರೂಪಾಯಿಗಳ ಬಡ್ಡಿ ಕೊಡುವಂಥ ಸ್ಥಿತಿ ನಿರ್ಮಾಣವಾಗಿದೆ, ಇದಕ್ಕೆ ಏನೂ ನಿಯಂತ್ರಣ ನಮ್ಮ ಸರ್ಕಾರಗಳಲ್ಲಿ ಇಲ್ಲವೆ? ಈ ನಿಯಂತ್ರಣ ಮಾಡದೇ ಹೋದರೆ, ಅವರು ಆತ್ಮಹತ್ಯೆಯಾಗಿದೆ ಎಂದಾಕ್ಷಣ ಸರ್ಕಾರದವರು ಒಂದು ಲಕ್ಷ ರೂಪಾಯಿಗಳ ಹಣ ನೀಡುತ್ತಾರೆ, ಇದು ಒಂದು ರೀತಿಯಲ್ಲಿ ಪ್ರಚೋದನೆಯಾಗುತ್ತದೆಂಬುದು ನನ್ನ ಭಾವನೆ. ಪ್ರಚೋದನೆ ಮಾಡುವ ರೀತಿಯಲ್ಲಿ ನಾವು ಎಲ್ಲರೂ ರಾಜಕೀಯ ಮಾಡಿದರೆ ಮುಂದೆ ರೈತನ ಬಾಳು ಹಸನಾಗದೇ ಹಾಳಾಗುತ್ತದೆ. ಇವತ್ತು ರೈತನ ಸ್ಥಿತಿ ಏನಾಗಿದೆ ಎಂದರೆ, ದಿನ ಸಾಯುವವರಿಗೆ ಅಳುವವರು ಯಾರು ಎನ್ನುವಂತಾಗಿದೆ. ಯಾವ್ಯ ಜಿಲ್ಲೆಯಲ್ಲಿ ನೋಡಿದರೂ ಕೂಡ ರೈತ ಸತ್ತ, ಏಕೆಂದರೆ ಅವನು ಸಾಲ ಮಾಡಿದ್ದ, ಬೆಳೆ ಬರಲಿಲ್ಲ ಎನ್ನುವಂತಾಗಿದೆ, ಆದ್ದರಿಂದ ಈ ನಿಟ್ಟಿನಲ್ಲಿ ಇದರ ಬಗ್ಗೆ ವೈಜ್ಞಾನಿಕವಾಗಿ ಚರ್ಚಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಇದ್ದಾರೆ,

ಹೀಗಾಗಿ ಎಲ್ಲಾ ಪಕ್ಷಗಳ ಸದಸ್ಯರು ಸೇರಿಕೊಂಡು ಈ ಬಗ್ಗೆ ಬಹಳ ಗಂಭೀರವಾಗಿ ಚರ್ಚಿಸಬೇಕಾಗುತ್ತದೆ. ಏಕೆಂದರೆ, ಸುಮಾರು 3-4 ವರ್ಷಗಳ ಹಿಂದೆ ಗುಲ್ಬರ್ಗಾ ಮತ್ತು ಆಂಧ್ರದಲ್ಲಿ ರೈತರು ಸತ್ತಾಗ ಕಾಂಗ್ರೆಸ್ ಪಕ್ಷದಿಂದ ಹೈಕಮಾಂಡ್‌ನವರು ಬಂದು ಇದನ್ನೆಲ್ಲಾ ನೋಡಿದಂಥ ಸಂದರ್ಭದಲ್ಲಿ ಆಗ ಒಂದು ದೊಡ್ಡ ಪ್ರಚಾರವೇ ಸಿಕ್ಕಿತ್ತು. ಆ ದಿನ ಅಲ್ಲಿರುವಂಥವರು ಈ ಕಡೆ ಇದ್ದರು. ನಾಳೆ ನಾವು ಅಧಿಕಾರಕ್ಕೆ ಬರುತ್ತೇವೆ, ಇದಕ್ಕೆ ಅಷ್ಟು ಪ್ರಚಾರ ಕೊಡಬಾರದಾಗಿತ್ತು ಎನ್ನುವ ಚಿಂತನೆ ಆವತ್ತು ಅವರಿಗೆ ಇರಲಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ ನಾನೂ ಕೂಡ ಈ ಸದನದಲ್ಲಿ ಇದ್ದೆ, ಆಗ ಇವರು ನಿಮ್ಮ ಸರ್ಕಾರದಲ್ಲಿ ಇಷ್ಟೊಂದು ಆತ್ಮಹತ್ಯೆಗಳು ಆಗುತ್ತವೆಂದು ದೊಡ್ಡ ಗಲಾಟೆಯನ್ನು ಮಾಡಿದ್ದರು.

ಅಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರವರೆ, ರೈತರ ಆತ್ಮಹತ್ಯೆಯ ಬಗ್ಗೆ ಮಾತ್ರ ಮಾತನಾಡಿ ರಾಜಕೀಯದ ಬಗ್ಗೆ ಏಕೆ ಮಾತನಾಡುತ್ತೀರಿ? ಅವರು ರಾಜಕೀಯ ಮಾಡಿದರು, ಇವರು ರಾಜಕೀಯ ಮಾಡಿದರು ಇವೆಲ್ಲಾ ಏಕೆ?

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ನಾನು ಅದಕ್ಕೆ ಹೇಳುತ್ತಿರುವುದು, ಇದನ್ನು ಯಾರೂ ಕೂಡ ರಾಜಕೀಯವಾಗಿ ಉಪಯೋಗಿಸಬಾರದು ಎನ್ನುವ ಮಾತನ್ನು ಒತ್ತಿ ಹೇಳುತ್ತಿದ್ದೇನೆ.

ಅಧ್ಯಕ್ಷರು: ಯಾವುದಾದರೊಂದು ರೀತಿಯಲ್ಲಿ ಇದಕ್ಕೆ ಏನು ಪರಿಹಾರ ಮಾಡಬೇಕೆಂದು ಎಲ್ಲರೂ ಕುಳಿತುಕೊಂಡು ಮಾತನಾಡಿ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ನಾನು ಈ ವಿಷಯ ಚರ್ಚಿಸಲು ರೂಲ್ 69ರ ಮೇರೆಗೆ ಕೇಳಿದ್ದೆ. ತಾವು ಶೂನ್ಯವೇಳೆಯಲ್ಲಿ ನನಗೆ ಅವಕಾಶ ಕೊಟ್ಟಿದ್ದೀರಿ, ಇನ್ನು ಅನೇಕ ಜನ ಮಾತನಾಡುವವರು ಇದ್ದಾರೆ. ಏಕೆಂದರೆ, ಇದು ಬಹಳ ಗಂಭೀರವಾದ ವಿಷಯವಾಗಿದೆ.

ಅಧ್ಯಕ್ಷರು: ಈ ವಿಷಯ ಬೇಕಾದಷ್ಟು ಸಲ ಇಲ್ಲಿ ಚರ್ಚೆಯಾಗಿದೆ, ಇದೇ ಮೊದಲನೇ ಸಲ ಅಲ್ಲ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಚರ್ಚೆಯಾಗಿದೆ, ಆದರೆ ಪರಿಹಾರ ಏನೂ ಕಂಡುಹಿಡಿದಿಲ್ಲವಲ್ಲಾ? ಅದಕ್ಕೆ ಏನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಹೈಕಮಾಂಡ್‌ನವರು ಬಂದು ಎಲ್ಲಾ ಕಡೆ ಹೋಗಿ ಪ್ರಚಾರ ಕೊಟ್ಟರು, ಕಳೆದ ವರ್ಷ ಮಾಜಿ ಪ್ರಧಾನಿಯವರು ಹುಬ್ಬಳ್ಳಿ-ಧಾರವಾಡ, ಗದಗ್ ಕಡೆಗೆ ಹೋಗಿ ನೋಡಿಕೊಂಡು

ಬಂದರಲ್ಲಾ ಆಗ ಪ್ರಚಾರ ಸಿಕ್ಕಲಿಲ್ಲವೆ?

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಒಬ್ಬರು ಮಾಡಿದ್ದು ಸರಿ, ಇನ್ನೊಬ್ಬರು ಮಾಡಿದ್ದು ತಪ್ಪು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಎಲ್ಲರೂ ಮಾಡುವುದು ತಪ್ಪು. ನಾವು ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವ ಕೆಲಸ ಮಾಡಬಾರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈ ಸದನದಲ್ಲಿ ಆ ವಿಷಯವನ್ನು ನಾವು ಪ್ರಸ್ತಾಪಿಸಿದಾಗ ಸದನ ಸಮಿತಿ ರಚನೆಯಾಯಿತು. ನಿಮ್ಮ ಪಕ್ಷದವರಾದ ಶ್ರೀ ಜಿ.ಬಿ.ವಿವಕುಮಾರ್‌ರವರು ಅಧ್ಯಕ್ಷರಾದರು, ನಾನು ಆ ಸಮಿತಿಯ ಸದಸ್ಯನಾಗಿರಲಿಲ್ಲ, ನಮ್ಮ ಪಕ್ಷದ ಕೆಲವು ಸದಸ್ಯರು ಅದರಲ್ಲಿ ಸದಸ್ಯರಾಗಿದ್ದರು, ಎಲ್ಲಾ ಕಡೆ ಹೋಗಿ ಯಾವರೀತಿ ಪರಿಹಾರ ಕೊಡಬೇಕು ಎಂದು ಒಂದು ವರದಿಯನ್ನು ಕೊಟ್ಟರು, ಇದನ್ನು ತಾವು ಮಾಡಿದ್ದೇ ಹೊರತು ನಾವು ಮಾಡಿದ್ದಲ್ಲ, ಈಗ ಆ ಪರಿಸ್ಥಿತಿಯಿಲ್ಲವಲ್ಲಾ.

ಅಧ್ಯಕ್ಷರು: ಈ ವಿಷಯ ಬಹಳ ಮುಖ್ಯವಾಗಿದೆ ಎಂಬುದು ನನಗೆ ಗೊತ್ತಿದೆ, ಸಾಕಷ್ಟು ಬಾರಿ ಈ ವಿಷಯ ಚರ್ಚೆಯಾಗಿದೆ. ಅದೇ ರೀತಿಯಲ್ಲಿ ಬೇರೆ ಇನ್ನಿತರ ವಿಷಯಗಳನ್ನೂ ಕೂಡ ಚರ್ಚಿಸಬೇಕಾಗಿದೆ. ಆದ್ದರಿಂದ ತಾವು ಬೇಗ ಮುಗಿಸಿ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ: ಇವತ್ತು ಖಾಸಗಿ ಸಾಲಗಳನ್ನು ನೀಡುವುದನ್ನು ನಿಲ್ಲಿಸದೇ ಇದ್ದರೆ ಬಹಳ ಕಷ್ಟವಾಗುತ್ತದೆ, ಇವತ್ತು ವೆಂಡರ್ಸ್ ಲೈಸನ್ಸ್ ಇಲ್ಲದೇ ಮಾಡುವವರು ಇದ್ದಾರೆ. ನಾವು ಇದನ್ನು ತಡೆ ಹಿಡಿಯದಿದ್ದರೆ ರೈತರ ಸಾವುಗಳು ಸಾಲಾಗಿ ನಿಲ್ಲುತ್ತವೆ. ಇವತ್ತು ಯಾರಾದರೊಬ್ಬ ರೈತ ಸತ್ತರೆ ಯಾರೂ ಕೂಡ ಹೋಗಿ ನೋಡುತ್ತಿಲ್ಲ, ಕಾರಣ ಏನೆಂದರೆ, 'ದಿನ ಸಾಯುವವರಿಗೆ ಅಳುವವರು ಯಾರು' ಎನ್ನುವಂಥ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ರೈತನ ಸಾವನ್ನು ತಪ್ಪಿಸಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಜಮೀನಿನಲ್ಲಿ ಬೆಳೆ ಬರಲಿಲ್ಲ, ಅದೇ ಕಾರಣಕ್ಕೋಸ್ಕರ ಸತ್ತ ಅಥವಾ ತನಗೆ ನಷ್ಟವಾಯಿತು ಅದಕ್ಕಾಗಿ ಸತ್ತ ಎಂದು ಹೇಳಿದರೆ ಅದರಲ್ಲಿ ನನಗೆ ನಂಬಿಕೆಯಿಲ್ಲ. ಎಲ್ಲಾ ಪಕ್ಷಗಳವರು ಸೇರಿ ಇದರ ಬಗ್ಗೆ ವೈಜ್ಞಾನಿಕವಾಗಿ ಏನಾಗಿದೆ ಎಂಬುದನ್ನು ಕಂಡುಹಿಡಿಯಬೇಕಾಗಿದೆ. ನಾಳೆ ರೈತ ಯಾವುದೇ ಸಮಸ್ಯೆಯಿಂದ ಸತ್ತರೂ ಅದಕ್ಕೆ ಪ್ರಚಾರ ಕೊಟ್ಟರೆ, ನಾಳೆ ಯಾವುದೇ ಸರ್ಕಾರ ಇದ್ದರೂ ಕೂಡ ಅದಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ, ಖಾಸಗಿ ಸಾಲ ನೀಡುವಂಥ ದಂಧೆಯನ್ನು ನಿಲ್ಲಿಸಬೇಕು. ರೈತನಿಗೆ ಸೂಕ್ತ ಬೆಲೆ ಸಿಗುವಂಥ ಕೆಲಸ ಮಾಡಬೇಕು ಎಂದು ಹೇಳಿ ತಮ್ಮ ಮುಖೇನ ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

+ ಶ್ರೀ ಸಿ.ಭೈರೇಗೌಡ(ವೇಮಗಲ್): ಮಾನ್ಯ ಅಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ತಾವೂ ಕೂಡ ಏನು ಮಾಡಬೇಕೆನ್ನುವ ಬಗ್ಗೆ ಸಲಹೆ ಕೊಡಿ

ಎಂದು ಹೇಳಿದರಿ, ನಾನು ಅದಕ್ಕಾಗಿ ಇಲ್ಲಿ ಎದ್ದು ನಿಂತಿದ್ದೇನೆ. ನನ್ನ ಅಧ್ಯಕ್ಷತೆಯಲ್ಲಿ ಏಷಯ ಸಮಿತಿ ರಚನೆಯಾಗಿತ್ತು, ಅಲ್ಲಿ ನಾವು ಇದನ್ನು ಬಹಳ ಸೂಕ್ಷ್ಮವಾಗಿ ಪರಿಶೀಲಿಸಿದ್ದೇವೆ. ನಾವು ಅಲ್ಲಿ ಏನು ಸಲಹೆ ಕೊಟ್ಟಿದ್ದೇವೆ ಎಂದರೆ, ಮಾನ್ಯ ಶ್ರೀನಿವಾಸಗೌಡರವರು ಹೇಳಿದ ಹಾಗೆ ಬೆಳೆ ನಾಶವಾಯಿತು, ಇದಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ಎಂಬ ಮಾತನ್ನು ನಾನೂ ಕೂಡ ಒಪ್ಪುವುದಿಲ್ಲ. ಇದಕ್ಕೆ ನಾನಾ ಕಾರಣಗಳಿರಬಹುದು, ಇಲ್ಲಿಯವರೆಗೆ ಯಾರೂ ಕೂಡ ವೈಜ್ಞಾನಿಕವಾದ ಕಾರಣವನ್ನು ಪತ್ತೆ ಹಚ್ಚಿಲ್ಲ. ಇದಕ್ಕೆ ಸಮಿತಿ ಏನು ಸಲಹೆ ಮಾಡಿದೆ ಎಂದರೆ, ಇದಕ್ಕೊಂದು ''ಏಚಾರಣಾ ಸಮಿತಿ'' ಎಂದು ಮಾಡಿ ಅದರಲ್ಲಿ ಆರ್ಥಿಕ ತಜ್ಞರು, ಮನೋವಿಜ್ಞಾನಿಗಳು, ಸಾಮಾಜಿಕ ಕಾರ್ಯಕರ್ತರು ಸದಸ್ಯರಾಗಿರಬೇಕು, ಇವರೆಲ್ಲರೂ ಸೇರಿ ಈ ಆತ್ಮಹತ್ಯೆಗಳು ಎಲ್ಲಿ ನಡೆದಿವೆ ಅಲ್ಲಿಗೆ ಖುದ್ದಾಗಿ ಹೋಗಿ ಈ ಕೇಸ್ ಸ್ಟಡಿ ಮಾಡಬೇಕು ಎನ್ನುವ ಸಲಹೆಯನ್ನು ನಾವು ಕೊಟ್ಟಾಗ, ಸಮಿತಿಯ ಮುಂದೆ ಬಂದಂಥ ಅಧಿಕಾರಿಗಳಿಗೆ ಇದು ಜಾಗ್ರತೆಯಾಗಿ ಕಾರ್ಯರೂಪಕ್ಕೆ ಬರಬೇಕು ಎನ್ನುವ ಸಲಹೆಯನ್ನು ನಾವು ನೀಡಿದ್ದೇವೆ. ಆದರೆ, ಇಲ್ಲಿಯವರೆಗೆ ಆ ರೀತಿಯಾದಂಥ ಏಚಾರದ ಬಗ್ಗೆ ಸರ್ಕಾರ ಏಚಾರ ಮಾಡಿಲ್ಲ. ಸಮಿತಿ ರಚಿಸುವುದಕ್ಕೆ ಸರ್ಕಾರ ಮುಂದಾಗಿಲ್ಲ, ಇದು ಜಾಗ್ರತೆಯಾಗಿ ಆಗಬೇಕಾದ ಕೆಲಸ. ಏಕೆಂದರೆ, ಎಲ್ಲರೂ ತಮ್ಮ ತಮ್ಮ ಮೂಗಿನ ನೇರಕ್ಕೆ ಹೇಳುವಂಥಾದ್ದು ಸರಿಯಲ್ಲ, ಅದಕ್ಕೆ ಏನು ಕಾರಣ ಎಂಬುದನ್ನು ಮೂಲದಲ್ಲಿ ಅದನ್ನು ಟ್ರ್ಯಾಕೆಲ್ ಮಾಡಬೇಕಾಗಿರುವುದರಿಂದ ದಯಮಾಡಿ ನೀವು ಆ ಕೆಲಸವನ್ನು ಮಾಡಬೇಕಾಗುತ್ತದೆ. Today, public lending system is a thorough failure. ಇದು ಸಹಕಾರಿ ವಲಯ ಇರಬಹುದು, ವಾಣಿಜ್ಯ ಬ್ಯಾಂಕ್ ಇರಬಹುದು, ಖಾಸಗಿಯವರು ಲೇವಾದೇವಿ ಮಾಡುವಂಥ ವ್ಯವಸ್ಥೆಯಲ್ಲಿ ಕಾನೂನು ಪರಿಪಾಲನೆ ಆಗುತ್ತಿಲ್ಲ, ಇದರ ಬಗ್ಗೆ ಸರ್ಕಾರ ಯೋಚಿಸಬೇಕಾಗಿದೆ. ಇವತ್ತು ಈ ಖಾಸಗಿಯವರು ನೂರು ರೂಪಾಯಿಗಳಿಗೆ ಹತ್ತು ರೂಪಾಯಿಗಳಷ್ಟು ಬಡ್ಡಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು: ನೀವು ಪುನಃ ಏವರಕ್ಕೆ ಹೋಗುತ್ತಿದ್ದೀರಿ, ಖಾಸಗಿ ಸಾಲಗಳನ್ನು ನಿಲ್ಲಿಸಬೇಕೆಂದು ಹೇಳಿ.

ಶ್ರೀ ಸಿ.ಭೈರೇಗೌಡ: ಇದನ್ನು ನಿಷೇಧಗೊಳಿಸುವುದಕ್ಕೆ ಹಾಗೂ ಇವತ್ತು ಇರುವ ಕಾನೂನನ್ನು ಬಿಗಿಗೊಳಿಸುವುದಕ್ಕೆ ಆಡಳಿತ ಯಂತ್ರ ಚುರುಕಾಗಬೇಕಾದಂಥ ಅವಶ್ಯಕತೆಯಿದೆ. ತಮಗೆ ಗೊತ್ತಿರುವಂತೆ ಆರ್‌ಎಂಸಿ-ಯಲ್ಲಿ ದಲ್ಲಾಳಿಗಳು ಇರುತ್ತಾರೆ, ಇವರು ಯಾವ ರೈತನಿಂದ ಎಷ್ಟು ಮಾಲು ತೆಗೆದುಕೊಂಡೆವು, ಎಷ್ಟು ಜನರಿಗೆ ಕೊಟ್ಟಿದ್ದೇವೆ ಎನ್ನುವ ಲೆಕ್ಕವನ್ನು ಬರೆಯುವುದಿಲ್ಲ. ಸಾಲ ಎಷ್ಟು ಇದೆ ಎಂಬುದು

ರೈತನಿಗೆ ಗೊತ್ತಿಲ್ಲದೇ ಇರುವಂಥ ಪರಿಸ್ಥಿತಿ ಇಂದು ಇದೆ. ಲೇವಾದೇವಿಗಾರರಿಂದ ಮಾನಸಿಕವಾದ ಆಘಾತಕ್ಕೆ ರೈತರು ಒಳಗಾಗುತ್ತಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಕೆಲಸ ಪ್ರಾರಂಭವಾದರೆ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಗುತ್ತದೆ, ಜೊತೆಗೆ ಆತ್ಮಹತ್ಯೆಯಂಥ ಪ್ರಕರಣಗಳು ಕಡಿಮೆಯಾಗುತ್ತವೆ. ದಯವಿಟ್ಟು ಈ ಎರಡು ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ, ದಯವಿಟ್ಟು ಇದಕ್ಕೆ ಉತ್ತರ ಅವರು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಈ ಬಗ್ಗೆ ಉತ್ತರ ಕೊಡುವುದಕ್ಕೆ ಯಾರೂ ಮೇಲಕ್ಕೆ ಏಳುತ್ತಿಲ್ಲ, ನಾನೇನು ಮಾಡಲಿ?

ಶ್ರೀ ಸಿ.ಭೈರೇಗೌಡ: ಈ ವಿಚಾರಕ್ಕೆ ತಾವು ಉತ್ತರ ಕೊಡಿಸಬೇಕು. ನಾವು ಸುಮ್ಮನೆ ಕಂಠ ಶೋಷಣೆ ಮಾಡಿಕೊಳ್ಳುವುದಕ್ಕೋಸ್ಕರ ಇಲ್ಲಿಗೆ ಬಂದಿಲ್ಲ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಉತ್ತರ ಕೊಡಬೇಕೆಂದು ನಿಯಮವಿಲ್ಲ.

+ ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ಆತ್ಮಹತ್ಯೆ ಪ್ರಕರಣಗಳು ಯಾರಿಗೂ ಸಹ ಸಂತೋಷ ತರತಕ್ಕಂಥ ಬೆಳವಣಿಗೆಯಲ್ಲ. ಇದನ್ನು ತಡೆಯಬೇಕಾಗಿದೆ. ಹಾಗೆಯೇ ಇಂಥ ಪ್ರಕರಣಗಳನ್ನು ತಡೆಯಲಿಕ್ಕೆ ಪಕ್ಷಾತೀತವಾಗಿ ನಾವೆಲ್ಲರೂ ಕೂಡ ಪ್ರಯತ್ನ ಮಾಡುವುದನ್ನು ಮುಂದುವರಿಸಬೇಕಾಗುತ್ತದೆ. ನೆನ್ನೆ ಅಥವಾ ಮೊನ್ನೆ ದಿವಸಗಳಿಂದ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿಲ್ಲ. ಕಳೆದ ನಾಲ್ಕಾರು ವರ್ಷಗಳಿಂದ ಇದು ನಡೆಯುತ್ತಿದೆ. ನಮ್ಮ ದೇಶದ ಆರ್ಥಿಕ ಬೆಳವಣಿಗೆಗಳ ಸಂದಿಗ್ಧ ಪರಿಸ್ಥಿತಿಗಳಿಂದಾಗಿ ಈ ರೀತಿಯಾದ ಘಟನೆಗಳು ನಡೆಯುತ್ತಿವೆ. ಇದು ಕೇವಲ ನಮ್ಮ ರಾಜ್ಯದಲ್ಲಿ ಮಾತ್ರ ನಡೆಯುತ್ತಿಲ್ಲ. ಪಂಜಾಬ್ ರಾಜ್ಯದಲ್ಲಿ ಒಂದು ವರ್ಷದ ಅವಧಿಯೊಳಗೆ ಎಷ್ಟು ಆತ್ಮಹತ್ಯೆಗಳು ಆಗಿದೆ ಎಂಬುದರ ಬಗ್ಗೆ ಈ ಸದನದಲ್ಲಿ ನಾನು ಈಗಾಗಲೇ ಅಂಕಿ-ಅಂಶಗಳನ್ನು ಕೊಟ್ಟಿದ್ದೇನೆ. ವೈಜ್ಞಾನಿಕವಾಗಿ ಇದಕ್ಕೊಂದು ಸಮಜಾಯಿಷಿಯನ್ನು ಕೊಡುವುದಕ್ಕೋಸ್ಕರ ಇವತ್ತಿನ ಸನ್ನಿವೇಶಗಳಲ್ಲಿ ಅದರ ಅಗತ್ಯತೆ ಬಹಳ ಇದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ರಾಜಕಾರಣ ಮಾಡತಕ್ಕಂಥಾದ್ದು ಸಾಧುವಲ್ಲ ಎನ್ನತಕ್ಕಂಥ ತಮ್ಮ ಅಭಿಪ್ರಾಯಕ್ಕೆ ನಮ್ಮ ಸಹಮತ ಕೂಡ ಇದೆ. ಇದನ್ನು ನಿಭಾಯಿಸುವುದಕ್ಕೆ ಒಬ್ಬ ಸೈಕಲಾಜಿಸ್ಟ್ ಮತ್ತು ಇತರ ಜನಗಳು ಸೇರಿ ಇದರ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ಮಾಡುವಂಥ ಒಂದು ವ್ಯವಸ್ಥೆ ಆಗಬೇಕೆಂದು ಮಾನ್ಯ ಸದಸ್ಯರು ಸರ್ಕಾರಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ. ಆ ಸಲಹೆಯನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಅತೀ ಶೀಘ್ರದಲ್ಲಿ

ಒಂದು ಸಮಿತಿ ಮಾಡಿ ವೈಜ್ಞಾನಿಕವಾಗಿ ಅಧ್ಯಯನ ಆಗಬೇಕಾಗಿರತಕ್ಕಂಥಾದ್ದು ಜರೂರೆಂದು ನಾನು ಒಪ್ಪಿಕೊಳ್ಳುತ್ತೇನೆ. ಆತ್ಮಹತ್ಯೆ ಪ್ರಕರಣಗಳು ಸಾಮಾಜಿಕ ಕಾರಣಗಳಿಂದ ಆಗಿದ್ದರೆ, ಈ ಕಾರಣಗಳನ್ನೂ ಕೂಡ ಅಧ್ಯಯನ ಮಾಡಿದಾಗ ಇಂಥ ಪ್ರಕರಣಗಳಿಗೆ ಅದರ ಮೂಲಕ ಕೂಡ ಬೆಳಕು ಬೀರಬಹುದು. ಬಹುಶಃ ಇದನ್ನು ಈ ಸದನವು ಕೂಡ ಒಪ್ಪುತ್ತದೆಂದು ನನ್ನ ಭಾವನೆಯಾಗಿದೆ. ಹಾಗೆಯೇ ಈ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಅಭಿಪ್ರಾಯ ಕೊಡುತ್ತಾರೆಂಬುದು ನನಗೆ ಗೊತ್ತಿಲ್ಲ. ಬಹುಶಃ ಈ ಒಂದು ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರತಕ್ಕಂಥ ಸ್ಟೆಪ್‌ಗಳಿಗೆ ತಮ್ಮ ಸಕಾರಾತ್ಮಕವಾದ ಸ್ಪಂದನೆ ಕೂಡ ಇದೆ ಎನ್ನತಕ್ಕಂಥಾದ್ದು ನನ್ನ ಭಾವನೆಯಾಗಿದೆ. ಅತೀ ಶೀಘ್ರದಲ್ಲಿ ಈ ಸದನ ಮುಗಿಯುವುದರೊಳಗೆ ಈ ಸದನದಲ್ಲಿ ಸಮಿತಿಯ ರೂಪುರೇಷೆಗಳು ಏನೆಂಬುದನ್ನು ನಾನು ಪ್ರಕಟಣೆ ಮಾಡುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಏನೊಂದು ವಿಚಾರವನ್ನು ವ್ಯಕ್ತಪಡಿಸಿದ್ದಾರೆ, ಇದಕ್ಕೆ ನಮ್ಮ ಸಹಮತ ಇದೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ವಿಷಯದ ಬಗ್ಗೆ ಸದನದಲ್ಲಿ ಸಾಕಷ್ಟು ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಇವತ್ತಿನ ದಿವಸ ರೈತನಿಗೆ ಮನೋಸ್ಥೈರ್ಯ ತುಂಬುವಂಥ ಕೆಲಸ ಆಗಬೇಕಾಗಿದೆ. ಹಾಗೆಯೇ ಸನ್ಮಾನ್ಯ ಬೈರೇಗೌಡರು ವಿಷಯ ಸಮಿತಿಯ ಅಧ್ಯಕ್ಷರಾಗಿ ಅನೇಕ ಸಲಹೆಗಳನ್ನು ಕೃಷಿಗೆ ಸಂಬಂಧಪಟ್ಟಂತೆ ಕೊಟ್ಟಿದ್ದಾರೆ. ಹಿಂದೆ ಜನತಾದಳ ಸರ್ಕಾರ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳನ್ನು ಅಧ್ಯಯನ ಮಾಡುವುದಕ್ಕೋಸ್ಕರ ಒಂದು ಜಂಟಿ ಸದನ ಸಮಿತಿಯನ್ನು ರಚನೆ ಮಾಡಿತ್ತು. ಸದರಿ ಸಮಿತಿಗೆ ನಾನೂ ಕೂಡ ಸದಸ್ಯನಾಗಿದ್ದೆನು ಹಾಗೆಯೇ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರೂ ಸಹ ಈ ಸಮಿತಿಯ ಸದಸ್ಯರಾಗಿದ್ದರು. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಯಲ್ಲಿ ಸುಮಾರು 10 ರಿಂದ 12 ಜನ ರೈತರು ಆತ್ಮಹತ್ಯೆ ಮಾಡಿಕೊಂಡಂಥ ಸಂದರ್ಭದಲ್ಲಿ ಸಮಿತಿಯು ಸ್ಥಳಕ್ಕೆ ಹೋಗಿ ಅಧ್ಯಯನ ಮಾಡಿಕೊಂಡು ಬಂದು ಒಂದು ವರದಿಯನ್ನು ಕೊಟ್ಟಿದೆ. ಈ ಎಲ್ಲಾ ವರದಿಯನ್ನು ತಾವು ಪರಿಶೀಲನೆ ಮಾಡಬೇಕು. ಈಗ ಇನ್ನೊಂದು ಸಮಿತಿಯನ್ನು ರಚನೆ ಮಾಡಲಾಗುತ್ತದೆಂದು ತಾವು ಹೇಳಿದ್ದೀರಿ. ಇದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಇವತ್ತಿನ ದಿವಸ ಇದರ ಹಿನ್ನೆಲೆಯ ಬಗ್ಗೆ ಮನೋವೈಜ್ಞಾನಿಕವಾಗಿ ಚಿಂತನೆ ಆಗಬೇಕಾಗಿದೆ. ಮತ್ತೆ ಕೆಲವೊಂದು ಸಂದರ್ಭಗಳಲ್ಲಿ ತುರ್ತು ಪರಿಹಾರವನ್ನು ಕೊಡತಕ್ಕಂಥ ಅಗತ್ಯತೆ ಕೂಡ ಇದೆ. ಹಾಗೆಯೇ ಇದಕ್ಕೊಂದು ಖಾಯಂ ಪರಿಹಾರವನ್ನು ಹುಡುಕುವಂಥ ಕೆಲಸ ಕೂಡ ಆಗಬೇಕಾಗಿದೆ. ಇವತ್ತಿನ ದಿವಸ ರೈತ ಬೆಳೆದಂಥ ಬೆಳೆಗೆ ಸರಿಯಾದಂಥ ಬೆಲೆಯನ್ನು ಕೊಟ್ಟರೆ ಮಾತ್ರ ಇದಕ್ಕೊಂದು ಖಾಯಂ ಪರಿಹಾರ ಹುಡುಕಿದಂತೆ ಆಗುತ್ತದೆ. ಬಡ್ಡಿ ಮತ್ತು ಸಾಲವನ್ನು ಮನ್ನಾ ಮಾಡಿ ಎಂದು

ಅವರು ಕೇಳುವುದಿಲ್ಲ. ಆತ ಬೆಳೆದಂತಹ ಬೆಳೆಗೆ ಸರಿಯಾದಂಥ ಬೆಲೆಯನ್ನು ಕೊಟ್ಟರೆ ಬಹುಶಃ ಎಲ್ಲದಕ್ಕೂ ಪರಿಹಾರ ಹುಡುಕುವುದಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು 1998ರಲ್ಲಿ ರಾಜ್ಯಸಭಾ ಮೆಂಬರ್ ಆಗಿದ್ದಂಥ ಸಂದರ್ಭದಲ್ಲಿ ಕರ್ನಾಟಕ ಮತ್ತು ಪಂಜಾಬ್, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದರ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದೀರಿ. ಆ ಸಂದರ್ಭದಲ್ಲಿ ತಾವೂ ಕೂಡ ರೈತನ ಬಗ್ಗೆ ಕಳಕಳಿಯನ್ನು ವ್ಯಕ್ತಮಾಡಿದ್ದೀರಿ. ಹಾಗೆಯೇ ತಮ್ಮ ಪ್ರಶ್ನೆಗೆ ರಾಜ್ಯಸಭೆಯಲ್ಲಿ ಉತ್ತರ ಕೂಡ ಸಿಕ್ಕಿದೆ. ಆದ್ದರಿಂದ, ಇವೆಲ್ಲವನ್ನೂ ತಾವು ಪರಿಗಣನೆಗೆ ತೆಗೆದುಕೊಂಡು ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ನಮ್ಮ ರೈತ ಬದುಕಿದರೆ ಮಾತ್ರ ನಮ್ಮ ರಾಜ್ಯ ಮತ್ತು ರಾಷ್ಟ್ರ ಬದುಕುವುದಕ್ಕೆ ಸಾಧ್ಯವಾಗುತ್ತದೆ. ಆದರೆ ರೈತ ನಾಶವಾದರೆ ನಮ್ಮ ದೇಶ ಮತ್ತು ನಮ್ಮ ನಾಡು ನಾಶವಾಗುತ್ತದೆ. ಆದ್ದರಿಂದ ರೈತನ ಏಳಿಗೆಯ ಬಗ್ಗೆ ಆದ್ಯತೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಕ್ಕೆ ಸಂಬಂಧಪಟ್ಟಂತೆ ಅರ್ಧ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು: ಅವರು ಸರಿಯಾದ ಉತ್ತರ ಕೊಟ್ಟಿದ್ದಾರೆ. ಈಗ ಮಾನ್ಯ ಸಭಾಪತಿಯವರೇ, ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವುದಕ್ಕೆ ತಯಾರಿದ್ದಾರೆ.

ಶ್ರೀ ಡಿ.ಜಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಖಾಸಗಿಯವರು ನೀಡತಕ್ಕಂಥ ಸಾಲವನ್ನು ನಿಲ್ಲಿಸಬೇಕೆಂಬುದು ಮಾನ್ಯ ಬೈರೇಗೌಡರ ಪ್ರಶ್ನೆಯಾಗಿದೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವ ವ್ಯವಹಾರಗಳೆಲ್ಲಾ ಖಾಸಗಿಯವರು ನೀಡುತ್ತಿರುವ ಸಾಲದಿಂದಲೇ ನಡೆಯುತ್ತಿದೆ. ಇದನ್ನು ಶಾಸನದ ಮೂಲಕ ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಂದು ಮಾನ್ಯ ಬೈರೇಗೌಡರು ಹೇಳುವುದಾದರೆ ಅದನ್ನು ಖಂಡಿತ ಜಾರಿಗೆ ತರುತ್ತೇವೆ.

ಶ್ರೀ ಸಿ.ಬೈರೇಗೌಡ: ಇದಕ್ಕೆ ಹಿಂದೆ ಒಂದು ಕಾನೂನು ಇತ್ತು. ಖಾಸಗಿಯಾಗಿ ಮನಿಲೆಂಡಿಂಗ್ ಮಾಡುವ ಹಾಗಿಲ್ಲ. ಆದ್ದರಿಂದ ಮನಿಲೆಂಡಿಂಗ್ ಆಕ್ಟ್‌ನ್ನು ಬಿಗಿಗೊಳಿಸತಕ್ಕಂಥ ಕಾರ್ಯ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಇಲ್ಲಿ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ನಾವು ಮಾಡತಕ್ಕಂಥ ಸಮಿತಿ ಮನಿಲೆಂಡಿಂಗ್ ಆಕ್ಟ್‌ನ್ನೂ ಕೂಡ ಪರಿಶೀಲನೆ ಮಾಡುತ್ತದೆ.

ಈ) ಬಾಬುರಾವ್ ದೇಶಪಾಂಡೆ ಸ್ಮಾರಕ ಟ್ರಸ್ಟ್ ಸಂಸ್ಥೆಯ ಪರವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಪ್ರದೇಶವನ್ನು ಮಂಜೂರಾತಿಗೊಳಿಸಿ ಅಕ್ರಮವಾಗಿ ಕಟ್ಟಿದ ಕಟ್ಟಡವನ್ನು ಸಕ್ರಮಗೊಳಿಸಿರುವುದು.

ಶ್ರೀ ಯು.ಆರ್.ಸಭಾಪತಿ(ಉಡುಪಿ): ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಮಲ್ಲೇಶ್ವರಂ 11ನೇ ಕ್ರಾಸ್‌ನಲ್ಲಿರತಕ್ಕಂಥ ಬಾಬುರಾವ್ ದೇಶಪಾಂಡೆ ಟ್ರಸ್ಟ್‌ನವರಿಗೆ ಬೆಂಗಳೂರು ಮಹಾನಗರ ಪಾಲಿಕೆಯವರು 3,954 ಚದರ ಅಡಿ ಹಾಗೂ 1977 ಚದರ ಅಡಿ ನೆಲ ಅಂತಸ್ತಿಗೆ ವಾಹನ ನಿಲುಗಡೆ ಮಾಡಲು ಅನುಮತಿ ಕೊಟ್ಟಿದೆ. ಹಾಗೆಯೇ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಗಳೆಲ್ಲವನ್ನು ಬದಿಗೊತ್ತಿ 12645 ಚದರ ಅಡಿ ಕಟ್ಟಡವನ್ನು ನಿರ್ಮಾಣ ಮಾಡಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಪ್ರಸ್ತಾಪ ಮಾಡಿ ಈ ಸದನದ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದು ಕೋರ್ಟ್‌ನಲ್ಲಿರತಕ್ಕಂಥ ವಿಚಾರವಾಗಿದೆ. ಆದ್ದರಿಂದ ಇದರ ಬಗ್ಗೆ ವಿಶ್ಲೇಷಣೆ ಮಾಡುವಂಥಾದ್ದು ಅಷ್ಟೊಂದು ಸಾಧುವಲ್ಲ. ಸುದ್ದಿ ಮಾಧ್ಯಮಗಳಲ್ಲಿ ಬರತಕ್ಕಂಥಾದ್ದು ಮತ್ತು ಶಾಸನಸಭೆಯಲ್ಲಿ ಇದರ ಬಗ್ಗೆ ಇಂಟರ್‌ವೆನ್‌ಷನ್ ಮಾಡತಕ್ಕಂಥಾದ್ದಕ್ಕೆ ಬಹಳ ವ್ಯತ್ಯಾಸ ಇದೆ. ಆದ್ದರಿಂದ ಈ ವಿಷಯದ ಬಗ್ಗೆ ನ್ಯಾಯಾಲಯ ಈಗಾಗಲೇ ಗಮನಿಸಿರುವುದರಿಂದ ಇದನ್ನು ಇಲ್ಲಿಗೆ ಬಿಟ್ಟುಬಿಡುವುದು ಒಳ್ಳೆಯದೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉ) ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ ಮಾರಾಟ.

+ ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ನಕಲಿ ಛಾಪಾ ಕಾಗದಗಳ ಹಾವಳಿ ನಿರಂತರವಾಗಿ ನಡೆಯುತ್ತಿರುವುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ಹಾಗೆಯೇ ಈ ವಿಷಯ ಈಗಾಗಲೇ ಅನೇಕ ಪತ್ರಿಕೆಗಳಲ್ಲಿಯೂ ಸಹ ಬಂದಿದೆ. ಮೊನ್ನೆತಾನೆ ಭದ್ರಾವತಿಯಲ್ಲಿ ವಿಜಾನೆಯಿಂದಲೇ ಛಾಪಾಕಾಗದಗಳನ್ನು ಸ್ಟಾಂಪ್ ವೆಂಡರ್‌ಗಳಿಗೆ ಕೊಟ್ಟಿದ್ದಾರೆಂದು ಧೃಡಪಟ್ಟಿದೆ. ಇದನ್ನು ಅಧಿಕಾರಿಗಳೂ ಸಹ